# ಅನಾಗರಿಕ ನಗರೀಕರಣದಿಂದ ಜಲಕ್ಷಾಮ: ಡಾ.ರಾಮಚಂದ್ರ

ಶಿರಸಿ, ನ.7: ಅರಣ್ಯ ನಾಶ ಹಾಗೂ ಅನಾಗರಿಕ ನಗರೀಕರಣದಿಂದಾಗಿ ಜಲಕ್ಷಾಮ ತಲೆದೋರಿದೆ. ಕೆರೆಗಳನ್ನು ನುಂಗಿ ಕಾಂಕ್ರೀಟ್ ಕಾಡು ನಿರ್ಮಾಣದಿಂದ ಉಂಟಾದ ಬೆಂಗಳೂರಿನಂಥ ಶಹರದಲ್ಲಿನ ನೀರಿನ ಅಭಾವದ ಸ್ಥಿತಿ ಉತ್ತರ ಕನ್ನಡ ಜಿಲ್ಲೆಗೂ ಬರಬಾರದೆಂದರೆ ಇಲ್ಲಿನ ಕಾಡನ್ನು, ಜಲಮೂಲಗಳನ್ನೂ ರಕ್ಷಿಸಲೇಬೇಕಿದೆ ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ। ಟಿ.ವಿ.ರಾಮಚಂದ್ರ ಹೇಳಿದರು.

ಪಶ್ಚಿಮ ಘಟ್ಟದ ಕೆರೆಗಳು ಹಾಗೂ ಜಲಮೂಲಗಳ ಸಂರಕ್ಷಣೆ-ನಿರ್ವಹಣೆ ಕುರಿತು ನ.13 ರಿಂದ ಸ್ವರ್ಣವಲ್ಲಿಯಲ್ಲಿ ನಡೆಯಲಿರುವ ಕೆರೆ ಸಮ್ಮೇಳನದ ಪೂರ್ವಭಾವಿಯಾಗಿ ಇಂದು ಲಯನ್ಸ್ ಶಾಲೆಯಲ್ಲಿ ಘಟ್ಟದ ಮೇಲಿನ ವಿವಿಧೆಡೆಯ ಶಾಲೆಗಳ 40 ವಿದ್ಯಾರ್ಥಿಗಳು ಸಿದ್ಧಪಡಿಸಿದ ಜಲಮೂಲ ಅಧ್ಯಯನ ವರದಿ ಮಂಡನಾ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.



ಜಲಕ್ಷಾಮ ತಲೆದೋರಲು ನಾವು ಮಾಡಿದ ತಪ್ಪನ್ನು ಮುಂದಿನ ಜನಾಂಗವೂ ಮಾಡಬಾರದು. ಪಶ್ಚಿಮ ಘಟ್ಟದ ಸಂರಕ್ಷಣೆ ತೀರಾ ಅಗತ್ಯವಾಗಿದ್ದು ಈ ದಿಸೆಯಲ್ಲಿ ಇಂದಿನ ಮಕ್ಕಳು ಜಾಗೃತರಾದರೆ ಪರಿಸರ ಹಾಗೂ ನಾಡಿನ ರಕ್ಷಣೆ ಸಾಧ್ಯ ಎಂಬ ಆಶಾಭಾವನೆಯಿಂದ ಈ ಸಮ್ಮೇಳನ ನಡೆಸಲಾಗುತ್ತಿದೆ. ಜ್ಞಾನಾರ್ಜನೆಯು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ತಿಳಿಸಿದರು. ವೇದಿಕೆಯಲ್ಲಿ ವಿಜ್ಞಾನಿ ಡಾ.ಸುಭಾಷ್‌ಚಂದ್ರನ್ ಕುಮಟಾ, ಲಯನೆಸ್ ಅಧ್ಯಕ್ಷೆ ಶ್ರೀಮತಿ ಸುಮಂಗಲಾ ಹೆಗಡೆ, ವಿಜ್ಞಾನಿ ಪ್ರಕಾಶ ಮೇಸ್ತ, ಲಯನ್ಸ್ ಪ್ರೌಢಶಾಲೆ ಮುಖ್ಯಾಧ್ಯಾಪಕ ಮೋಹನ ಹೆಗಡೆ ಉಪಸ್ಥಿತರಿದ್ದರು.

ಲಯನ್ಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಲ.ಎಂ.ಎಂ.ಭಟ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ವೃಕ್ಷಲಕ್ಷ ಆಂದೋಲನದ ಸಂಚಾಲಕ ಗಣಪತಿ ಕೆ. ಬಿಸ್ಲಕೊಪ್ಪ ನಿರ್ವಹಿಸಿ ವಂದಿಸಿದರು. ನಂತರ ವಿದ್ಯಾರ್ಥಿಗಳು ಸಿದ್ಧಪಡಿಸಿದ ಅಧ್ಯಯನ ವರದಿ ಪ್ರಸ್ತುತಪಡಿಸಿದರು. ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಅಶೀಸರ ಪಾಲ್ಗೊಂಡಿದ್ದರು.